226 ಶ್ರೀ ರೇವಣ್ಣ ಹೆಚ್.ಡಿ
ಮಾನ್ಯ ಗೃಹ ಸಚಿವರು

ಅ. ಹಾಸನ ಜಿಲ್ಲೆಯ ಕೃಷ್ಣ ನಗರದಲ್ಲಿ ಕೆ.ಎಸ್.ಆರ್.ಪಿ.ಯ 9ನೇ ಪಡೆ, ಬೆಟಾಲಿಯನ್ ಅನ್ನು ಸರ್ಕಾರ ಮಂಜೂರು ಮಾಡದೆಯೇ; ಹಾಗಿದ್ದಲ್ಲಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ;

ಹಾಸನ ಜಿಲ್ಲೆಯ ಕೃಷ್ಣ ನಗರದಲ್ಲಿ ಕೆಎಸ್ಆರ್‌ಪಿಯ 11ನೇ ಬೆಟಾಲಿಯನ್ ಸರ್ಕಾರವು ತನ್ನ ಆದೇಶ ಸಂಖ್ಯೆ. ಹೆಚ್‌ಡಿ 65 ಪಿಒಪಿ 2006, ದಿನಾಂಕ: 17–05–2007 ರಲ್ಲಿ ಸ್ಥಾಪಿಸಲು ಮಂಜೂರಾತಿಯನ್ನು ನೀಡಿದೆ. ಈ ಪಡೆಯು ದಿನಾಂಕ: 29–10–2007 ರಿಂದ ಕಾರ್ಯನಿರ್ವಹಿಸುತ್ತಿದೆ. 9ನೇ ಬೆಟಾಲಿಯನ್ ಬೆಂಗಳೂರಿನ ಕೂಡ್ಲುವಿನಲ್ಲಿ ಮಂಜೂರು ಮಾಡಲಾಗಿರುತ್ತದೆ.

ಆ. ಇಲ್ಲಿಯವರೆವಿಗೂ ಸರ್ಕಾರ ಮಂಜೂರು ಮಾಡಿರುವ ಹಣವೆಷ್ಟು ಹಾಗೂ ಮುಕ್ತಾಯಗೊಳಿಸಲು ಅವಶ್ಯಕತೆ ಇರುವ ಹಣವೆಷ್ಟು; ಯಾವಾಗ ಮುಕ್ತಾಯ ಮಾಡಲಾಗುತ್ತದೆ;

ಹಾಸನ ನಗರದ ಎಸ್.ಎಂ. ಕೃಷ್ಣ ಬಡಾವಣೆಯಲ್ಲಿ 200 ಎಕರೆ ಜಮೀನಿಗೆ ರೂ. 8,00,00,000–00 ಹಾಗೂ ಮೂಲಭೂತ ಸೌಕರ್ಯಕ್ಕಾಗಿ ಈವರೆಗೆ ಒಟ್ಟು ರೂ. 1,87,58,000–00 ಮಂಜೂರು ಮಾಡಲಾಗಿದೆ. ಸದರಿ ಘಟಕಕ್ಕೆ ಇನ್ನು ಮೂಲ ಸೌಕರ್ಯಗಳಾದ ವಸತಿ ಮತ್ತು ವಸತಿಯೇತರ ಕಟ್ಟಡಗಳ ನಿರ್ಮಾಣಕ್ಕೆ ರೂ. 114.32 ಕೋಟಿಗಳ ಅವಶ್ಯಕತೆ ಇರುತ್ತದೆ.

ಇ. ಕೆ.ಎಸ್.ಆರ್.ಪಿ.ಯ 11ನೇ ಬೆಟಾಲಿಯನ್‌ಗೆ ಸಂಬಂಧಪಟ್ಟಂತೆ ನೇಮಕಾತಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ: ಹಾಗಿಲ್ಲದಿದ್ದಲ್ಲಿ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಮಂಜೂರಾಗಿರುವ ಒಟ್ಟು 1037 ಹುದ್ದೆಗಳ ಪೈಕಿ 280 ವಿವಿಧ ದರ್ಜೆಯ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದ್ದು, ಉಳಿದ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

0-1053-135

227 ಶ್ರೀ ಹೆಚ್.ಡಿ ರೇವಣ್ಣ(ಹೊಳೆನರಸೀಪುರ)
ಶ್ರೀ ಹೆಚ್.ಕೆ. ಕುಮಾರಸ್ವಾಮಿ(ಸಕಲೇಶಪುರ)
ಮಾನ್ಯ ಮುಖ್ಯಮಂತ್ರಿ